[redacted]

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ:— ಸರ್ಕಾರಿ ಸೇವೆಗಳ ನೇರ ನೇಮಕಾತಿಯಲ್ಲಿ ಮಹಿಳೆಯರಿಗೆ ಮೀಸಲಿರಿಸಿರುವ ರಿಕ್ತ ಸ್ಥಾನಗಳನ್ನು ಭರ್ತಿ ಮಾಡುವ ಬಗ್ಗೆ ಮತ್ತು ವಿವಿಧ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸ್ಪಷ್ಟೀಕರಣ.

ಓದಲಾಗಿದೆ:— ೧) ದಿನಾಂಕ:೨೦ ನೇ ಜೂನ್ ೧೯೯೫ ರ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ ೦೮ ಸೇಹಿಮ ೯೫.

೨) ದಿನಾಂಕ:೧೯ ನೇ ಆಗಸ್ಟ್ ೧೯೯೫ ರ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ ೨೮ ಸೇಸೇನಿ ೯೫.

೩) ದಿನಾಂಕ:೬ ನೇ ಮಾರ್ಚ್ ೧೯೯೬ ರ ಅಧಿಸೂಚನೆ ಸಂಖ್ಯೆ:ಡಿಪಿಎಆರ್ ೩೪ ಎಸ್‌ಆರ್‌ಆರ್ ೯೫.

೪) ದಿನಾಂಕ:೧೫-೬-೧೯೯೬ ರ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ ೩೪ ಸೇಸೇನಿ ೯೫.

೫) ದಿನಾಂಕ:೨೩-೧೧-೨೦೦೦ ರ ಅಧಿಸೂಚನೆ ಸಂಖ್ಯೆ:ಡಿಪಿಎಆರ್ ೨೩ ಎಸ್‌ಆರ್‌ಆರ್ ೯೯.

೬) ೨೦೦೦ ದ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ.

—

<u>ಪ್ರಸ್ತಾವನೆ</u>:—

೧. ಕ್ರಮ ಸಂಖ್ಯೆ:(೧) ರಲ್ಲಿ ಓದಲಾದ ದಿನಾಂಕ:೨೦ ನೇ ಜೂನ್ ೧೯೯೫ ರ ಸರ್ಕಾರಿ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿ ನೇರ ನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ ೧೬(೪) ರ ಪ್ರಕಾರ ಅಳವಡಿಸಿಕೊಳ್ಳಬೇಕಾದ ಮೀಸಲಾತಿ ವಿಧಾನ ಮತ್ತು ಅದಕ್ಕಾಗಿ ಅನುಸರಿಸಬೇಕಾದ ರೋಸ್ಟರನ್ನು ನಿಗದಿಪಡಿಸಲಾಗಿದೆ. ಈ ಆದೇಶದ ಕಂಡಿಕೆ ೨ ರಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, ೧೯೭೭ ರ ನಿಯಮ ೯ ರನ್ವಯ ಮಾಜಿ ಸೈನಿಕರಿಗೆ ಮೀಸಲಾತಿ ಬಗ್ಗೆ ಆಸ್ಪದವನ್ನು ಕಲ್ಪಿಸಿದೆ.

೨. ಕ್ರಮಸಂಖ್ಯೆ: (೨) ರಲ್ಲಿ ಓದಲಾದ ದಿನಾಂಕ:೧೯ ನೇ ಆಗಸ್ಟ್ ೧೯೯೫ ರ ಆದೇಶದಲ್ಲಿ ಮೇಲೆ ಹೇಳಿದ ನಿಯಮಗಳ ನಿಯಮ ೯(೧ಎ) ಅನ್ವಯ ಅಂಗವಿಕಲರ ಮೀಸಲಾತಿ ಬಗ್ಗೆ ಆಸ್ಪದವನ್ನು ಕಲ್ಪಿಸಲಾಗಿದೆ.

೩. ಕ್ರಮ ಸಂಖ್ಯೆ (೩) ರಲ್ಲಿ ಓದಲಾದ ದಿನಾಂಕ:೬-೩-೧೯೯೬ ರ ಅಧಿಸೂಚನೆಯಲ್ಲಿ, ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, ೧೯೭೭ ರ ನಿಯಮ ೯ ಕ್ಕೆ ಮಾಡಿರುವ ತಿದ್ದುಪಡಿ ನಿಯಮಗಳ ಅನ್ವಯ ರಾಜ್ಯ ಸರ್ಕಾರಿ ಸೇವೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ ೩೦ ರಷ್ಟು ಸ್ಥಾನಗಳನ್ನು ಮಹಿಳಾ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಅಸ್ಪದ ಕಲ್ಪಿಸಲಾಗಿದೆ.

೪. ಇವುಗಳನ್ನು ಕಾರ್ಯಗತಗೊಳಿಸುವ ಸಂಬಂಧದಲ್ಲಿ ಕೆಲವು ಮಾರ್ಗ ಸೂಚನೆಗಳನ್ನು ಹೊರಡಿಸುವುದು ಸೂಕ್ತವೆಂದು ಸರ್ಕಾರವು ನಿರ್ಧರಿಸಿ, ಕ್ರಮ ಸಂಖ್ಯೆ:(೪) ರಲ್ಲಿ ಓದಲಾದ ದಿನಾಂಕ:೧೫-೬-೧೯೯೬ ರ ಆದೇಶದಲ್ಲಿ ಮಾರ್ಗ ಸೂಚನೆಗಳನ್ನು ಹೊರಡಿಸಿದೆ.

೫. ಕ್ರಮ ಸಂಖ್ಯೆ:(೫) ರಲ್ಲಿ ಓದಲಾದ ದಿನಾಂಕ:೨೩–೧೧–೨೦೦೦ ರ ಅಧಿಸೂಚನೆಯಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್ – 'ಸಿ' ಮತ್ತು 'ಡಿ' ವೃಂದಗಳಿಗೆ ನೇರ ನೇಮಕಾತಿಗಾಗಿ ಶೇಕಡ ೫ ರಷ್ಟು ರಿಕ್ತ ಸ್ಥಾನಗಳನ್ನು ಯೋಜನೆಗಳಿಂದ ನಿರಾಶ್ರಿತರಾದವರ ಕುಟುಂಬಗಳ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಆಸ್ಪದ ಕಲ್ಪಿಸಿದೆ.

೬. ಕ್ರಮ ಸಂಖ್ಯೆ:(೬) ರಲ್ಲಿ ಓದಲಾದ ವಿಧೇಯಕದಲ್ಲಿ ರಾಜ್ಯ ಸರ್ಕಾರಿ ಸೇವೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ ಶೇಕಡಾ ೨೫ ರಷ್ಟು ರಿಕ್ತ ಸ್ಥಾನಗಳನ್ನು ಗ್ರಾಮೀಣ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ ೦೬ ಸೇನೆನಿ ೨೦೦೧, ಬೆಂಗಳೂರು, ದಿ: 13-02-2001.</u>

೭. ಮೇಲೆ ಹೇಳಿರುವ ಸನ್ನಿವೇಶದಲ್ಲಿ ನಿಯಮಗಳ ಆಸ್ಪದಗಳನ್ನು ಕಾರ್ಯಗತಗೊಳಿಸಲು ಕೆಳಕಂಡಂತೆ ಕ್ರಮ ತೆಗೆದುಕೊಳ್ಳತಕ್ಕದೆಂದು ಸರ್ಕಾರ ಈ ಮೂಲಕ ಆದೇಶಿಸಿದೆ:—

(೧) ಪ್ರತಿ ಸಂದರ್ಭದಲ್ಲಿ ನೇರ ನೇಮಕಾತಿಗೆ ಲಭ್ಯವಾಗುವ ರಿಕ್ತ ಸ್ಥಾನಗಳಿಗೆ ಮೇಲೆ ಕ್ರಮ ಸಂಖ್ಯೆ (೧) ರಲ್ಲಿ ಓದಲಾಗಿರುವ ದಿನಾಂಕ:೨೦ ನೇ ಜೂನ್, ೧೯೯೫ ರಂದು ಹೊರಡಿಸಿರುವ ಅಥವಾ ಕಾಲಕಾಲಕ್ಕೆ ಜಾರಿಯಲ್ಲಿರುವ ಮೀಸಲಾತಿ ಆದೇಶವನ್ನು:ಗಳನ್ನು ಅಳವಡಿಸಿ ಅದರನ್ವಯ ರಿಕ್ತ ಸ್ಥಾನಗಳನ್ನು ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗ, ಈ ವರ್ಗಗಳಲ್ಲಿ ವಿಂಗಡಿಸಿಕೊಳ್ಳತಕ್ಕದ್ದು.

(೨) ನಂತರ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, ೧೯೭೭ ರ ನಿಯಮ ೯(೧ಬಿ) ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿ ಮಹಿಳೆಯರಿಗಾಗಿ ಕಾದಿರಿಸಿರುವ ಶೇಕಡ ೩೦ ರಷ್ಟು ಸ್ಥಾನಗಳನ್ನು ನೀಡಲು, ಉಪಕಂಡಿಕೆ (೧) ರಲ್ಲಿ ಸೂಚಿಸಿರುವಂತೆ ವಿಂಗಡಿಸಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗ, ಈ ಪ್ರತಿ ವರ್ಗಕ್ಕೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ ಪ್ರತಿ ೧೦ ರ ಒಂದು ಗುಂಪಿನಲ್ಲಿ ಕ್ರಮ ಸಂಖ್ಯೆ: <u>೨, ೫</u> ಮತ್ತು <u>೮</u> ನೇ ಸ್ಥಾನಗಳನ್ನು ಮಹಿಳಾ ಅಭ್ಯರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದು.

(೩) ಉಪ ಕಂಡಿಕೆ (೨) ರಲ್ಲಿ ಸೂಚಿಸಿರುವ ನಿಯಮಗಳ ನಿಯಮ ೯(೧) ರನ್ವಯ ಮಾಜಿ ಸೈನಿಕರಿಗೆ ಶೇಕಡ ೧೦ ರಷ್ಟು ಸ್ಥಾನಗಳನ್ನು ಮತ್ತು ನಿಯಮ ೯( ೧ಎ ) ಅನ್ವಯ ಅಂಗವಿಕಲರಿಗೆ ಶೇಕಡ ೫ ರಷ್ಟು ರಿಕ್ತ ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಇವುಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಕ್ರಮ ಸಂಖ್ಯೆ:(೧) ರಲ್ಲಿ ಓದಲಾದ ದಿನಾಂಕ:೨೦ ನೇ ಜೂನ್ ೧೯೯೫ ರ ಆದೇಶದ ಕಂಡಿಕೆ ೨ ರಲ್ಲಿ ಮತ್ತು ಕ್ರಮ ಸಂಖ್ಯೆ:(೨) ರಲ್ಲಿ ಓದಲಾದ ದಿನಾಂಕ:೧೯ ನೇ ಆಗಸ್ಟ್, ೧೯೯೫ ರ ಆದೇಶದಲ್ಲಿ ಇದೇ ರೀತಿ ಮಾರ್ಗಸೂಚನೆಗಳನ್ನು ನೀಡಲಾಗಿದೆ. ಅಂದರೆ ಇದರ ಪರಿಣಾಮ ಉಪ ಕಂಡಿಕೆ (೧) ರಲ್ಲಿ ಸೂಚಿಸಿರುವಂತೆ ವಿಂಗಡಿಸಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗ,

ಈ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ ಪ್ರತಿ ನೂರರ ಒಂದು ಗುಂಪಿನಲ್ಲಿ ಪ್ರತಿ ಹತ್ತನೇ ಸ್ಥಾನವನ್ನು ಮಾಜಿ ಸೈನಿಕ ಅಭ್ಯರ್ಥಿಗಳಿಗಾಗಿ ಮತ್ತು ಪ್ರತಿ ೧೯, ೩೯, ೫೯, ೭೯ ಮತ್ತು ೯೯ ನೇ ಸ್ಥಾನಗಳನ್ನು ಅಂಗವಿಕಲ ಅಭ್ಯರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದು.

(೪) ಉಪ ಕಂಡಿಕೆ (೧) ರಲ್ಲಿ ಸೂಚಿಸಿರುವಂತೆ ವಿಂಗಡಿಸಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗ, ಈ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ ಪ್ರತಿ ೨೦ ರ ಒಂದು ಗುಂಪಿನಲ್ಲಿ ಪ್ರತಿ ೧೭ ನೇ ಸ್ಥಾನವನ್ನು ಯೋಜನೆಗಳಿಂದ ನಿರಾಶ್ರಿತರಾದವರ ಕುಟುಂಬದವರ ಅಭ್ಯರ್ಥಿಗಳಿಗಾಗಿ ಮತ್ತು ಪ್ರತಿ ೩, ೭, ೯, ೧೩ ಮತ್ತು ೧೭ ನೇ ಸ್ಥಾನಗಳನ್ನು ಗ್ರಾಮೀಣ ಅಭ್ಯರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದು.

(೫) ಉಪ ಕಂಡಿಕೆ(೨) ಮತ್ತು (೪) ರಲ್ಲಿ ವಿವರಿಸಿರುವ ಕ್ರಮಗಳನ್ನು ಇನ್ನೂ ಹೆಚ್ಚಿಗೆ ಸ್ಪಷ್ಟಪಡಿಸಲು ನಿದರ್ಶನವನ್ನು ಈ ಆದೇಶದ ಅನುಬಂಧದಲ್ಲಿ ಕಾಣಿಸಲಾಗಿದೆ.

(೬) ಮಹಿಳೆಯರಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಅದೇ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

(೭) ಮಾಜಿ ಸೈನಿಕರಿಗಾಗಿ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಾಜಿ ಸೈನಿಕ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಅದೇ ವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಸಹಿ
(ಎಸ್. ಚಂದ್ರಶೇಖರಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ—೧
ಸಿಬ್ಬಂದಿ ಮತ್ತು, ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ದಿನಾಂಕ: ೧೪—೨—೨೦೦೧ ರ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ ೫,೦೦೦ ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.